ನೀಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ವಿಷಯ: ಹೊಸ ಜಿಲ್ಲೆಗಳಲ್ಲಿ ಜಿಲ್ಲಾ ಪಂಚಾಯಿತಿ ರಚನೆ

2447 (2353)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸ ಜಿಲ್ಲೆಗಳ ರಚನೆ ಮಾಡಿರುವುದರಿಂದ ಆ ಜಿಲ್ಲೆಗಳಲ್ಲಿ ಹೊಸ ಜಿಲ್ಲಾ ಪಂಚಾಯತಿಗಳ ರಚನೆಗೆ ಸರ್ಕಾರವು ಕ್ರಮ ಕೈಗೊಂಡಿದೆಯೆ?

ಆ) ಹಾಗಿದ್ದಲ್ಲಿ ಹೊಸ ಜಿಲ್ಲಾಪಂಚಾಯತ್‌ಗಳು ಯಾವಾಗಿನಿಂದ ಜಾರಿಗೆ ಬರುತ್ತವೆ?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ಹೌದು

ಆ) ದಿನಾಂಕ: 1-4-1998ರಿಂದ

ವಿಷಯ: ತುಂಗಾ ಮೇಲ್ದಂಡೆ ಯೋಜನೆಯಡಿಯಲ್ಲಿ ಅರಣ್ಯ ಪ್ರದೇಶ ಮುಳುಗಡೆ

2448 (2622)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತುಂಗಾ ಮೇಲ್ದಂಡೆ ಯೋಜನೆಯ ಅಡಿಯಲ್ಲಿ ಮುಳುಗಡೆ ಆಗಲಿರುವ ಹಾಗೂ ಕಾಲುವೆಗೆ ಬೇಕಾದ ಅರಣ್ಯ ಜಮೀನು ಎಷ್ಟು?

ಆ) ಇದಕ್ಕೆ ಪರಿಹಾರವಾಗಿ ನೀರಾವರಿಯೇತರ ಬೆಲೆಯಿಂದ ಹಣ ತುಂಬಿದ್ದು ಯಾವಾಗ, ಬದಲಿ ಭೂಮಿ ಕೊಟ್ಟಿದ್ದು, ಯಾವುದು? ಯಾವಾಗ?

ಇ) ಇದುವರೆಗೆ ಅರಣ್ಯ ಭೂಮಿ ಹಸ್ತಾಂತರವಾಗದೆ ಕೆಲಸಕ್ಕೆ ತೊಂದರೆ ಆಗಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಹಸ್ತಾಂತರ ವಿಷಯ ಯಾವ ಹಂತದಲ್ಲಿದೆ?

ಉ) ಯಾವಾಗ ಹಸ್ತಾಂತರ ಮಾಡಲಾಗುವುದು

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು)

ಅ) ತುಂಗಾ ಮೇಲ್ದಂಡೆ ಯೋಜನೆಗೆ ಬೇಕಾಗುವ ಅರಣ್ಯ ಜಮೀನಿನ ವಿವರ

1. ತುಂಗಾ ಮೇಲ್ದಂಡೆ ಯೋಜನೆಯಿಂದ ಮುಳುಗಡೆಯಾಗಲಿರುವುದು - 427.29 ಹೆ.

2. ಕಾಲುವೆಗಾಗಿ - 22.26 ಹೆ.

ಒಟ್ಟು 449.55 ಹೆ.

ಅಥವಾ **450.00 ಹೆ.**

ಆ) ದಿನಾಂಕ 7-9-94ರಲ್ಲಿ 1.75 ಲಕ್ಷ ಹಾಗೂ 23-10-98ರಲ್ಲಿ 148.25 ಲಕ್ಷ ಒಟ್ಟು 150 ಲಕ್ಷ ರೂ.ಗಳನ್ನು ನೀರಾವರಿ ಇಲಾಖೆಯವರು ಪಾವತಿಸಿರುತ್ತಾರೆ.

ಬದಲಿ ಭೂಮಿ ಕೊಟ್ಟಿರುವ ವಿವರಗಳು:

ಹೊನ್ನಾಳಿ ತಾಲ್ಲೂಕು

1. ಮಾದೇನಹಳ್ಳಿ ಗ್ರಾಮ ಸರ್ವೆ ನಂ. 103, 121, 124 ಮತ್ತು 132

2. ತರಗೇನಹಳ್ಳಿ ಗ್ರಾಮ ಸರ್ವೆ ನಂ. 47, 65, 23 ಮತ್ತು 13

ಶಿವಮೊಗ್ಗ ತಾಲ್ಲೂಕು

1. ಬೆಳಲಕಟ್ಟೆ ಗ್ರಾಮ ಸರ್ವೆ ನಂ. 121 ಮತ್ತು 139

2. ತಿಪ್ಪೂರು ಗ್ರಾಮ ಸರ್ವೆ ನಂ. 19 ಮತ್ತು 8

ತೀರ್ಥಹಳ್ಳಿ ತಾಲ್ಲೂಕು

1. ಹುಳನಹಳ್ಳಿ ಗ್ರಾಮ ಸರ್ವೆ ನಃ 12, 22, 26 ಮತ್ತು 35

2. ಉರಕೇರಿ ಗ್ರಾಮ ಸರ್ವೆ ನಂ. 38, 45, 46 ಮತ್ತು 49

ಬಿ. ಹರಿಹರ ಪುರ ಗ್ರಾಮ ಸರ್ವೆ ನಂ. 17 ಮತ್ತು 50 ಈ ಮೇಲ್ಕಂಡ ಸಿ ಮತ್ತು ಡಿ ವರ್ಗದ ಜಮೀನು ಖಾತೆ ಬದಲಾವಣೆಯಾಗಬೇಕಾಗಿದ್ದು, ಈ ಬಗ್ಗೆ ಕಂದಾಯ ಇಲಾಖೆಯವರೊಡನೆ ವ್ಯವಹಾರಿಸಲಾಗುತ್ತಿದೆ.

ಇ) ಬಂದಿದೆ.

ಈ) ತುಂಗಾ ಮೇಲ್ದಂಡೆ ಯೋಜನೆಗೆ ಬೇಕಾಗುವ 449.55 ಹೆ. ಅರಣ್ಯ ಪ್ರದೇಶ ಬಿಡುಗಡೆ ಮಾಡುವ ಬಗ್ಗೆ ಅರಣ್ಯ (ಸಂರಕ್ಷಣಾ) ಕಾಯ್ಕೆ 1980ರ ರೀತ್ಯ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರವು ದಿನಾಂಕ 16-12-1996ರಲ್ಲಿ ಕೇಂದ್ರ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿರುತ್ತದೆ. ಕೇಂದ್ರ ಸರ್ಕಾರವು ತನ್ನ ದಿನಾಂಕ 25-4-97ರ ಪತ್ರದ ಮೂಲಕ ಕೆಲವೊಂದು ಸೃಷ್ಟೀಕರಣ: ಮಾಹಿತಿಯನ್ನು ಕೋರಿರುತ್ತಾರೆ. ಈ ಮಾಹಿತಿಗಳನ್ನು ಅರಣ್ಯ ಇಲಾಖೆಯಿಂದ ಮತ್ತು ನೀರಾವರಿ ಇಲಾಖೆಯಿಂದ ಪಡೆಯಲಾಗುತ್ತಿದ್ದು, ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗುವುದು.

ಉ) ಅರಣ್ಯ (ಸಂರಕ್ಷಣಾ) ಕಾಯ್ದೆ 1980ರ ಪ್ರಕಾರ ಕೇಂದ್ರ ಸರ್ಕಾರದಿಂದ ಪೂರ್ವಾನುಮತಿ ಪಡೆಯದೆ ಅರಣ್ಯ ಭೂಮಿ ಬಿಡುಗಡೆ ಮಾಡಲು ಆಸ್ಪದವಿಲ್ಲ. ಕೇಂದ್ರ ಸರ್ಕಾರ ಕೋರಿರುವ ಹೆಚ್ಚುವರಿ ಮಾಹಿತಿಗಳನ್ನು ಕಳುಹಿಸಿ ಆ ನಂತರ ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆದುಕೊಂಡು ಹಸ್ತಾಂತರಿಸಲಾಗುವುದು.

ವಿಷಯ: ರಾಜ್ಯದಲ್ಲಿ ಶಾಲಾ ಕೊಠಡಿಗಳ ಕೊರತೆ

2449 (2352)

ಶ್ರೀ ಯು.ಬಿ.ಬಣಕಾರ (ಹಿರೇಕೆರೂರು): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜಿಲ್ಲಾವಾರು ಕೊರತೆ ಇರುವ ಪ್ರಾಥಮಿಕ ಶಾಲಾ ಕೊಠಡಿಗಳ ಸಂಖ್ಯೆ ಎಷ್ಟು;

ಆ) 1997-98ನೇ ಸಾಲಿನಲ್ಲಿ ಯಾವ ಯಾವ ಯೋಜನೆಯಲ್ಲಿ ಈ ಕೊರತೆ ನೀಗಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ?

ಶ್ರೀ ಹೆಚ್.ಜಿ.ಗೋವಿಂದೆಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಅ) 20,080-00 (ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ)

ಆ) 1997-98ನೇ ಸಾಲಿನಲ್ಲಿ ರಾಜ್ಯ ವಲಯದ ಯೋಜನೆಗಳಡಿಯಲ್ಲಿ ಪ್ರಾಥಮಿಕ ಶಾಲಾ ಕೊಠಡಿಗಳನ್ನು ನಿರ್ಮಿಸಲು ಈ ಕೆಳಗಿನಂತೆ ಆಯವ್ಯಯ ಒದಗಿಸಿಕೊಂಡಿದೆ.